ಹಾಗಾದ್ರೆ ನೀವು ಏನನ್ನ ನಿರೀಕ್ಷೆ ಮಾಡ್ತಿದ್ದೀರಿ ಅಂತ ಕೆಲವರು ರೇಗಾಡಿದ್ರು. ಮತ್ತೆ ಕೆಲವರು ಟೀಕಿಸಿಯೂ ಬರೆದರು. 'ಇಲ್ಲ ಸರ್, ನೀವು ಬರಹಗಾರರಿಗೆ ಅನ್ಯಾಯ ಮಾಡ್ತಿದ್ದೀರಿ' ಅಂದ್ರು. ಅಲ್ಲ ಕಣ್ರೀ ಒಬ್ಬ ಬರಹಗಾರ ಯಾವಾಗ್ಲೂ ಬರಹಗಾರನೇ ಅಥವಾ ಬರಹಗಾರ್ತಿಯೇ. ಸತ್ವ ಇತ್ತು ಅಂದ್ರೆ ಉಳಿದೇ ಉಳೀತಾರೆ. ಇದರಲ್ಲಿ ಅನ್ಯಾಯ ಮಾಡುವಂಥದ್ದು ಏನಿದೆ? ಅಂತ ಕೇಳಿದ್ದೆ. ನಾನು ಆವಾಗ ಏನು ಹೇಳಿದ್ದೆ ಅದನ್ನ ಇವಾಗ್ಲೂ ಒಪ್ಪಿಕೊಳ್ತೇನೆ. ಆ ಕಾಲದಲ್ಲಿ ಬಹುತೇಕರು ಇದೊಂದು ಮುಖ್ಯವಾದ ತಕರಾರು ಅನ್ನೋದನ್ನ ಪರಿಗಣಿಸಲಿಕ್ಕೆ ಸಿದ್ಧರಿರಲಿಲ್ಲ. ಇದೇನೊ ನಮಗೆ ಉಪಯುಕ್ತ ಆಗಬಹುದು, ನಮ್ಮ ಬರವಣಿಗೆಯನ್ನ ಪರೀಕ್ಷೆ ಮಾಡ್ಕೊಳ್ಳಲಿಕ್ಕೆ ಅಂತಲೂ ಅನ್ನಿಸಲಿಲ್ಲ ಯಾರಿಗೂ. ಬರಗೂರು ರಾಮಚಂದ್ರಪ್ಪ ಅವರ ಎರಡೂಮೂರು ಕೃತಿಗಳಿಗೆ ಮುನ್ನುಡಿ ಬರೆದೆ. ಯಾವ ಪುಸ್ತಕದಲ್ಲೂ ಹಾಕಿಕೊಳ್ಳಲಿಲ್ಲ ಅದನ್ನ. ಅದರೊಳಗೂ ಕೂಡ ಈ ವಿಚಾರಗಳನ್ನ ಹೇಳಿದ್ದೀನಿ. ಮಹಾದೇವ ಅವರನ್ನು ಬಿಟ್ರೆ ಬೇರೆಯವರ ಬಗ್ಗೆ ನಾನು ಬರೆದಿಲ್ಲ ಅಂತಲ್ಲ. ಕಡಿಮೆ ಬರೆದಿರಬಹುದು. ಬರಗೂರರು ನನ್ನ ಆಪ್ತ ಗೆಳೆಯರು. ಆದರೆ ನನ್ನ ಬರವಣಿಗೆಯ ಬಗ್ಗೆ ಅವರೂ ಮಾತಾಡೋದಿಲ್ಲ, ಅವರ ಬರವಣಿಗೆಯ ಬಗ್ಗೆ ನಾನೂ ಮಾತಾಡೋದಿಲ್ಲ. ನಾವಿಬ್ರು ಮಾತಾಡಬಾರದು ಅಂತ ಪರಸ್ಪರ ಲಿಖಿತ ಒಪ್ಪಂದವನ್ನೇನೂ ಮಾಡಿಕೊಂಡಿಲ್ಲ. ಸಂದರ್ಭ ಬಂದಿಲ್ಲ ಅಷ್ಟೆ. ಬಂಡಾಯದ ಅನೇಕರ ಕೃತಿಗಳಲ್ಲಿ ಅದರ ಸಮರ್ಥನೆಗೆ ಬೇಕಾದ ಪರಿಕರಗಳು ಆ ಕೃತಿಗಳೊಳಗೇನೆ ಸಿಗೋದಿಲ್ಲ. ಅವೆಲ್ಲ ಒಂಥರದಲ್ಲಿ ಕಾಂಟೆಂಪರರಿ ರಿಯಾಕ್ಷನ್ಸ್ ತರಹ ಇದ್ವು. ಅದರಾಚೆಗೆ ಅವರು ಯಾವುದನ್ನ ಪರಿವರ್ತನೆ ಅಂತಿದ್ರೊ ಆ ಪರಿವರ್ತನೆಗೆ ಬೇಕಾದ ಮುಖ್ಯ ಸೂಚನೆಗಳು ಅಲ್ಲಿ ಇರ್ತಿರಲಿಲ್ಲ. ಇವತ್ತಿಗೂ ಇದನ್ನು ಮೀರಿದ ಕೃತಿಗಳನ್ನು ಬೆರಳು ಮಾಡಿ ತೋರಿಸೋದಕ್ಕೆ ಆಗೋದಿಲ್ಲ ನನಗೆ. ಶಿವರುದ್ರ ಕಲ್ಲೋಳಿಕರ ಅವರ 'ಹೊಲಗೇರಿಯ ರಾಜಕುಮಾರ' ಸಾಕಷ್ಟು ಒಳ್ಳೆಯ ಕಾದಂಬರಿ. ಅದರ ರಚನೆ ಸಾಕಷ್ಟು ವಿಭಿನ್ನವಾಗಿದೆ. ಆದ್ರೆ ಬಂಡಾಯ ಘಟ್ಟದಲ್ಲಿ ಯಾರೊಬ್ರೂ ಅದನ್ನ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಅದು ಮರುಮುದ್ರಣ ಆಗಬೇಕಾದ್ರೇನೆ ಮೂವತ್ತು ವರ್ಷ ಬೇಕಾಯ್ತೇನೊ. ಅಲ್ಲಲ್ಲಿ ಒಂದಿಬ್ರು ಈ ತರಹದ ಬರಹಗಾರರು ಇದ್ರು. ಆದ್ರೆ ಕಾಲವನ್ನು ದಾಟಿಕೊಂಡು ನಿಲ್ಲಬಹುದಾದ ಕೃತಿಗಳು ನನಗೆ ಕಂಡಿದ್ದು ಕಡಿಮೆ. ಹೀಗಾಗಿ ವಿಮರ್ಶೆಯನ್ನ ಬರೀಬೇಕು ಅನ್ನಿಸಲಿಲ್ಲ. ಈ ಕಾರಣದಿಂದಾಗಿ ಮೇಲಿನ ಮಾತುಗಳನ್ನು ನಾನು ಆಡಿರಬಹುದು. ದಲಿತ ಚಳವಳಿ ಬಗ್ಗೆ ನನಗೆ ಗೌರವ ಇದೆ. ಸಾಮಾಜಿಕವಾಗಿ ಅವರಿಗೆ ಕೆಲವು ಆಶಯಗಳಿದ್ವು. ಕಂಬಾಲಪಲ್ಲಿಯ ಹೋರಾಟ, ಅನೇಕ ಅತ್ಯಾಚಾರಗಳು, ಭೂಮಾಲೀಕರ ದೌರ್ಜನ್ಯಗಳು ಇತ್ಯಾದಿ. ಅವರಲ್ಲಿ ತುಂಬಾ ಜನ ಸಾಹಿತ್ಯದ ಬಗ್ಗೆ ತಲೆ ಕೆಡಿಸಿಕೊಂಡವರೂ ಅಲ್ಲ. ಒಂದು ಘನತೆಯ ಬದುಕಿಗಾಗಿ ಅವರಿಗೆ ಹೋರಾಟ ಬೇಕಿತ್ತು. ಆದರೆ ಬಂಡಾಯದವರಿಗೆ ಏನಿತ್ತು. ಸಾಹಿತ್ಯ ಕೃತಿಗಳನ್ನು ಹೊರತುಪಡಿಸಿದ ಬಂಡಾಯ ಚಳವಳಿ ಎಂಬುವುದಿತ್ತೆ?

**◆ ವಿಮರ್ಶಕರು ತಮ್ಮ ವಿಮರ್ಶಾ ವಿಧಾನಗಳ ಮೂಲಕ ಕುವೆಂಪು ಅವರನ್ನು ಪರೀಕ್ಷಿಸುವುದಕ್ಕಿಂತ, ಕುವೆಂಪು ಅವರ ಕೃತಿಗಳ ಮೂಲಕ ತಮ್ಮ ವಿಮರ್ಶಾ ವಿಧಾನಗಳನ್ನು ಪರೀಕ್ಷಿಸಿಕೊಳ್ಳುವುದೊಳಿತು ಅಂತ ಹೇಳಿದ್ರಿ. ಇದನ್ನ ಯಾರ ವಿಷಯದಲ್ಲಿ ಹೇಳಿದ್ರಿ ಅನ್ನೋದು ನನಗಷ್ಟು ಮುಖ್ಯ ಅಲ್ಲ. ಆದ್ರೆ ಮಹತ್ವದ ಕೃತಿಗಳು ವಿಮರ್ಶೆಯ ಮಾನದಂಡಗಳ ಅಸ್ತಿತ್ವವನ್ನು ಪ್ರಶ್ನಿಸ್ತವೆ ಅನ್ನೋದು ಮುಖ್ಯ. ಆದ್ರೆ ಇಂಥದ್ದೊಂದು ಸಾಧ್ಯತೆ ಕನ್ನಡ ವಿಮರ್ಶೆಯಲ್ಲಿ ಸಾಕಾರಗೊಂಡಿದೆಯೆ?**

ಸಾಮಾನ್ಯವಾಗಿ ಹೀಗೇ ಇರಬೇಕು ವಿಮರ್ಶೆ. ನನ್ನ ಹತ್ತಿರ ಒಂದು ವಿಮರ್ಶಾ ವಿಧಾನ ಇದೆ, ಇದಕ್ಕೆ ಎದುರಿನ ಕೃತಿ ಹೊಂದಿಕೊಳ್ಳುತ್ತೊ ಇಲ್ವೊ ಅಂತ ನೋಡೋದಿದೆಯಲ್ಲ ಅದು ಅಷ್ಟು ಒಳ್ಳೆಯದಲ್ಲ. ಅದಕ್ಕಿಂತ ನನ್ನೆದುರಿನ ಸಾಹಿತ್ಯ ಕೃತಿಗಳಿಗೆ ನನ್ನ ವಿಮರ್ಶಾ ವಿಧಾನಗಳನ್ನ ಪಲ್ಲಟಗೊಳಿಸೊ ಸಾಮರ್ಥ್ಯ ಇದೆಯಾ, ಸಾಧ್ಯತೆ ಇದೆಯಾ ಅಂತಲೇ ನೋಡ್ಬೇಕು. ಇದನ್ನ ಪ್ರತಿಕಾಲದಲ್ಲೂ ಕೇಳಿಕೊಳ್ಳಬೇಕು. ಸಾಹಿತ್ಯ ವಿಮರ್ಶೆ ರಿಲೆವೆಂಟ್ ಆಗಬೇಕು ಅಂದ್ರೆ ಈ